# ನಿಷ್ಠುರ ವ್ಯಕ್ತಿತ್ವದ ರಾಜನ್

ರಘುರಾಂ ರಾಜನ್ ಈಗ ಏನು ಮಾಡುತ್ತಿದ್ದಾರೆ? 'ಚಿಕಾಗೋ ವಿಶ್ವವಿದ್ಯಾನಿಲಯದ ಕ್ಯಾಂಪಸ್ ನಲ್ಲಿ ನೆಮ್ಮದಿಯಿಂದ ಪಾಠ ಮಾಡಿಕೊಂಡಿದ್ದಾನೆ. ದಿನಾಲೂ ಕ್ಯಾಂಪಸ್ ಬಳಿಯ ಲೇಕ್ ಸೈಡ್ ರಸ್ತೆಯಲ್ಲಿ ಸೈಕಲ್ ಹೊಡೆದುಕೊಂಡು ಓಡಾಡುವುದೇ ಮಜಾ ಅನುಭವ. ರಿಸರ್ವ್ ಬ್ಯಾಂಕ್ ಗವರ್ನರ್ ಆಗಿದ್ದಾಗ ಕೆಲವು ರಿಸರ್ಚ್ ಪೇಪರ್ ಗಳನ್ನು ಬರೆದದ್ದು ನಿಜ. ಆದರೆ ಈಗ ಇಲ್ಲಿ ಕಚೇರಿಯಲ್ಲಿ ಗಂಭೀರವಾಗಿ ಕುಳಿತು ಯೋಚಿಸಿ ಬರೆಯಲು ಸಾಕಷ್ಟು ಪುರುಸೊತ್ತು ಸಿಗುತ್ತಿದೆ' ಎಂದು ಸ್ವತಃ ರಾಜನ್ ಇತ್ತೀಚಿನ ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

ರಘುರಾಂ ರಾಜನ್ ಈಗ ನೆನಪಾಗುವುದಕ್ಕೆ ಕಾರಣವಿದೆ. ಅವರನ್ನು ಅಮೆರಿಕದ ಫೆಡರಲ್ ಬ್ಯಾಂಕ್ (ಯುಎಸ್ ಫೆಡರಲ್ ರಿಸರ್ವ್) ಮುಖ್ಯಸ್ಥರನ್ನಾಗಿ ಮಾಡಬೇಕು ಎನ್ನುವ ವಾದವೊಂದು ಅಮೆರಿಕದಲ್ಲಿ ಗಟ್ಟಿಯಾಗಿ ಕೇಳಿಸುತ್ತಿದೆ. ಬ್ಯಾರನ್ಸ್ ಎನ್ನುವ ಪ್ರಮುಖ ಜಾಗತಿಕ ಹಣಕಾಸು ನಿಯತಕಾಲಿಕವೊಂದು ಈ ಬಗ್ಗೆ ಲೇಖನವೊಂದನ್ನು ಪ್ರಕಟಿಸಿದೆ. 'ಕ್ರಿಕೆಟ್ ತಂಡಗಳಿಗೆ ವಿದೇಶಿ ಕೋಚ್‌ಗಳನ್ನು ನೇಮಿಸಿ ಅತ್ಯುತ್ತಮ ಫಲಿತಾಂಶ ಪಡೆಯುವುದಿಲ್ಲವೆ? ಹಾಗೆಯೇ ನಮ್ಮ ದೇಶದ (ಅಮೆರಿಕದ) ಫೆಡರಲ್ ಬ್ಯಾಂಕ್‌ಗೆ ಭಾರತೀಯ ರಘುರಾಂ ರಾಜನ್‌ರನ್ನು ಏಕೆ ನೇಮಿಸಬಾರದು?' ಎಂದು ಅದು ಪ್ರಶ್ನೆ ಹಾಕಿದೆ!

ರಾಜನ್ ಅಮೆರಿಕದ ಫೆಡರಲ್ ಬ್ಯಾಂಕಿನ ಮುಖ್ಯಸ್ಥರಾಗುತ್ತರೋ ಇಲ್ಲವೋ ಗೊತ್ತಿಲ್ಲ! ಆದರೆ ಅವರು ಈಗ ಮನಸ್ಸು ಮಾಡಿದರೆ ಭಾರತದಲ್ಲಿ ರಾಜ್ಯಸಭೆಯ ಸದಸ್ಯರಾಗಬಹುದು!

ಹೌದು, ದೆಹಲಿಯ ಮುಖ್ಯಮಂತ್ರಿ ಆಮ್ ಆದ್ಮಿ ಪಕ್ಷದ ಅರವಿಂದ ಕೇಜ್ರಿವಾಲ್, ರಾಜನ್ ಅವರನ್ನು ಸಂಪರ್ಕಿಸಿ ಈ ಆಹ್ವಾನ ನೀಡಿದ್ದಾರೆ. ದೆಹಲಿ ವಿಧಾನಸಭೆಯಿಂದ ರಾಜ್ಯಸಭೆಗೆ ನಡೆಯಲಿರುವ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷದ ಮೂವರು ಸದಸ್ಯರು ಸುಲಭವಾಗಿ ಗೆಲ್ಲಬಹುದು. ರಾಜಕೀಯ ನಾಯಕರ ಬದಲು ಬೇರೆ ಕ್ಷೇತ್ರದ ತಜ್ಞರನ್ನು ರಾಜ್ಯಸಭೆಗೆ ಆಯ್ಕೆ ಮಾಡುವುದು ಕೇಜ್ರಿವಾಲ್ ಯೋಚನೆ. ಹಾಗೆಂದೇ ಅವರು ಖುದ್ದಾಗಿ ರಾಜನ್ ಅವರಿಗೆ ಕರೆ ಮಾಡಿದ್ದಾರೆ. 'ವಾಪಸ್ ದೇಶಕ್ಕೆ ಬನ್ನಿ. ನಿಮ್ಮ ಅರ್ಥ ಕ್ಷೇತ್ರದ ಅನುಭವ ಮತ್ತೆ ದೇಶಕ್ಕೆ ಲಭಿಸಲಿ' ಎಂದು ಕೇಜ್ರಿವಾಲ್ ಹೇಳಿದ್ದಾರೆ. ಆದರೆ ರಾಜನ್ ಈ ಆಹ್ವಾನವನ್ನು ನಯವಾಗಿಯೇ ತಿರಸ್ಕರಿಸಿದ್ದಾರೆ. 'ಹುಡುಗರಿಗೆ ಪಾಠ ಮಾಡುವುದು ನನ್ನ ಅತ್ಯಂತ ಇಷ್ಟದ ಕೆಲಸ. ಸದ್ಯಕ್ಕೆ ಈ ಕೆಲಸ ಬಿಟ್ಟು ಬರುವುದಿಲ್ಲ' ಎಂದಿದ್ದಾರೆ!



ರಘುರಾಂ ರಾಜನ್ 2013 ರಿಂದ 2016ರವರೆಗೆ ಭಾರತೀಯ ರಿಸರ್ವ್ ಬ್ಯಾಂಕ್ ಗವರ್ನರ್ ಆಗಿದ್ದವರು. ಅದಕ್ಕೂ ಮುನ್ನ 2003–06ರಲ್ಲಿ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ (ಐಎಂಎಫ್)ಯಲ್ಲಿ ಮುಖ್ಯ ಅರ್ಥಶಾಸ್ತ್ರಜ್ಞರಾಗಿ ಉನ್ನತ ಹುದ್ದೆ ನಿರ್ವಹಿಸಿದವರು. ಅಮೆರಿಕದ ಆರ್ಥಿಕ ಹಿಂಜರಿತದ ಬಗ್ಗೆ ಅವರು ನೀಡಿದ್ದ ಮುನ್ನೆಚ್ಚರಿಕೆ ನಿಜವಾದದ್ದು ಅವರ ಹಿರಿಮೆಯನ್ನು ಹೆಚ್ಚಿಸಿತ್ತು.

ಭಾರತದಲ್ಲಿ ಆರ್‌ಬಿಐ ಹೊಣೆಗಾರಿಕೆ ನಿರ್ವಹಿಸುವ ಸಂದರ್ಭದಲ್ಲಿ ರಾಜನ್ ಹಲವು ಒತ್ತಡಗಳನ್ನು ವೃತ್ತಿಪರರಾಗಿ ನಿಭಾಯಿಸಿದರು. ಕೇಂದ್ರ ಸರ್ಕಾರದ ಕೆಲವು ನಿರ್ಧಾರಗಳಿಗೆ ಪೂರಕವಾಗಿ ಆರ್‌ಬಿಐ ಕೂಡಾ ವರ್ತಿಸಬೇಕೆಂಬ ಒತ್ತಡಗಳಿದ್ದವು. ಆದರೆ ರಾಜನ್ ಯಾವ ಒತ್ತಡಕ್ಕೂ ಬಗ್ಗಲಿಲ್ಲ. ದೇಶದ ಆರ್ಥಿಕ ಸ್ಥಿತಿಯನ್ನು ಸದೃಢಗೊಳಿಸುವ ದೀರ್ಘಕಾಲೀನ ಕ್ರಮಗಳತ್ತ ಗಮನ ಹರಿಸಿದರು. ಕೆಲವು ಸಂದರ್ಭಗಳಲ್ಲಿ ಅವರ ನೇರ ಮಾತುಗಳು ಸರಕಾರದ ಮುಖ್ಯ ಸ್ಥಾನಗಳಲ್ಲಿ ಇರುವವರಿಗೆ ಮುಜುಗರ ತಂದದ್ದೂ ಇದೆ. ಆದರೆ ಆರ್‌ಬಿಐ ಸ್ವಾಯತ್ತೆಗೆ ಭಂಗ ತರುವ ಯಾವ ಕ್ರಮಗಳನ್ನೂ ಕೈಗೊಳ್ಳಲು ರಾಜನ್ ಒಪ್ಪಲಿಲ್ಲ.

ಈ ಸಂದರ್ಭದಲ್ಲಿ ರಾಜನ್ ಅವರ ಕೆಲವು ಹೇಳಿಕೆಗಳಲ್ಲಿ ರಾಜಕೀಯದ ವಾಸನೆ ಇದೆ ಎಂದು ದೂರಿದವರಿದ್ದಾರೆ. ಆದರೆ ರಾಜನ್ ತಮ್ಮ ವೃತ್ತಿಯ ಘನತೆಯನ್ನು ಉಳಿಸಿಕೊಂಡೇ ಭಿನ್ನಮತವನ್ನು ವ್ಯಕ್ತಪಡಿಸಿದ್ದರು. 2016ರ ಫೆಬ್ರುವರಿಯಲ್ಲೇ ಕೇಂದ್ರ ಸರಕಾರ ನೋಟು ಅಮಾನ್ಯೀಕರಣದ ಬಗ್ಗೆ ಅವರ ಸಲಹೆಯನ್ನು ಮೌಖಿಕವಾಗಿ ಕೇಳಿತ್ತು. ಆದರೆ ರಾಜನ್ ಇದಕ್ಕೆ ವಿರೋಧ ವ್ಯಕ್ತಪಡಿಸಿದ್ದರು. 'ನೋಟು ಅಮಾನ್ಯೀಕರಣದಿಂದ ದೇಶದ ಆರ್ಥಿಕತೆಗೆ ಲಾಭವಾಗುವುದಕ್ಕಿಂತ ಗೊಂದಲ ಉಂಟಾಗುವುದೇ ಹೆಚ್ಚು. ಮಾಡುವುದು ಬೇಡ' ಎಂದು ರಾಜನ್ ಅಭಿಪ್ರಾಯ ಕೊಟ್ಟಿದ್ದರು. (ವರ್ಷದ ಬಳಿಕ ಪ್ರಕಟವಾದ ಅವರ ಪುಸ್ತಕವೊಂದರಲ್ಲಿ ಅವರೇ ಇದನ್ನು ಬಹಿರಂಗ ಪಡಿಸಿದ್ದಾರೆ.) ಬಹುಶಃ ಅದರ ಪರಿಣಾಮವೋ ಎಂಬಂತೆ ರಾಜನ್ ಅವರಿಗೆ ಆರ್‌ಬಿಐ ಗವರ್ನರ್ ಹುದ್ದೆ ಎರಡನೆ ಅವಧಿಗೆ ಸಿಗಲಿಲ್ಲ. ಅವರು ಆರ್‌ಬಿಐ ಬಿಟ್ಟು ಹೋದ ಆರು ತಿಂಗಳ ಬಳಿಕ ನೋಟು ಅಮಾನ್ಯೀಕರಣ ನಡೆಯಿತು. ಈಗ ನೋಡಿದರೆ ನೋಟು ಅಮಾನ್ಯೀಕರಣದ ಬಗ್ಗೆ ಅಂದು ರಾಜನ್ ನುಡಿದದ್ದು ಸತ್ಯವಾಗಿದೆ.

ರಾಜನ್ ಅವರಿಗೀಗ 54 ವರ್ಷ. ಐಐಟಿ ದೆಹಲಿ, ಐಐಟಿ ಅಹ್ಮದಾಬಾದ್ ಮತ್ತು ಸ್ಲೋವನ್ ಎಂಐಟಿ (ಪಿಎಚ್‌ಡಿ) ಗಳಲ್ಲಿ ಓದಿದ ರಾಜನ್ ಅಮೆರಿಕದಲ್ಲೂ ಅತ್ಯಂತ ಜನಪ್ರಿಯ. ಭಾರತೀಯ ಪೌರತ್ವ ಹೊಂದಿದ್ದು ಅಮೆರಿಕದ ಗ್ರೀನ್‌ಕಾರ್ಡ್ ಪಡೆದಿದ್ದಾರೆ. ಪತ್ನಿ ರಾಧಿಕಾ ಕೂಡಾ ಅಮೆರಿಕದಲ್ಲೇ ಕಾನೂನು ಪ್ರೊಫೆಸರ್ ಆಗಿದ್ದಾರೆ. ಒಬ್ಬ ಸೋದರನೂ ಅಲ್ಲೇ ಉದ್ದಿಮೆ ನಡೆಸುತ್ತಿದ್ದಾರೆ. ದೆಹಲಿಯ 'ಆಪ್' ಸರ್ಕಾರದ ಆಹ್ವಾನವನ್ನು ಒಪ್ಪಿ ರಾಜನ್ ಭಾರತಕ್ಕೆ ಮರಳಿ ರಾಜ್ಯಸಭೆ ಸದಸ್ಯರಾದರೆ ಒಳ್ಳೆಯದು ಎಂದು ಈಗಲೂ ಅವರ ಅಭಿಮಾನಿಗಳು ಬಯಸುತ್ತಿದ್ದಾರೆ. ಆದರೆ ರಾಜನ್ ತಮ್ಮ ನಿಲುವಿನಲ್ಲಿ ಸ್ಪಷ್ಟವಿದ್ದಾರೆ. ರಾಜ್ಯಸಭೆಯಲ್ಲಿ ಭಾಷಣ ಮಾಡುವುದಕ್ಕಿಂತ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಗೆ ಪಾಠ ಮಾಡುವುದೇ ಸಮಾಜಕ್ಕೆ ಹೆಚ್ಚು ಉಪಯುಕ್ತ ಎನ್ನುವುದು ಅವರ ನಿಲುವು. ■

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65